(೧೭) ಬಂಟ್ವಾಳ ತಾಲ್ಲೂಕಿನ ವಿಟ್ಲಕ್ಕೆ ಕೆ.ಇ.ಬಿ. ಸಬ್‌ಸ್ಟೇಷನ್ ಸ್ಥಾಪಿಸಲಂ ಸೂಕ್ತ ಸ್ಥಳವನ್ನು ಆಯ್ಕೆಮಾಡುವುದಂ

ಶ್ರೀ ಬಿ. ಎ ಉಮ್ಮರಬ್ಬ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕ್ ವಿಟ್ಲ ಪಟ್ಟಣಕ್ಕೆ ಒಂದು ಕೆ.ಇ.ಬಿ. ಸಬ್ ಸ್ಟೇಷನ್ ಮಂಜೂರಾಗಿ, ಈಗ ಸ್ಥಳದ ವಿವಾದದಿಂದಾಗಿ ಕೆಲಸ ಸ್ಥಗಿತವಾಗಿದೆ.

ಒಂದು ನಿರ್ದಿಷ್ಟ ಸ್ಥಳದಲ್ಲೇ ಇದು ಆಗಬೇಕೆಂದು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಹಠಹಿಡಿದಿದ್ದಾರೆ. ದುರದೃಷ್ಟವಶಾತ್ ಸ್ಥಳೀಯ ಹಾಗೂ ಜಿಲ್ಲಾ ಕೆ.ಇ.ಬಿ. ಅಧಿಕಾರಿಗಳು ಇವರೊಂದಿಗೆ ಶಾಮೀಲಾದಂತೆ ತೋರುತ್ತದೆ. ವಿಟ್ಲದಲ್ಲಿ ಮತ್ತಷ್ಟು ಸೂಕ್ತ ಸ್ಥಳ ಖಾಲಿ ಹಾಗೂ ಸರಕಾರಿ ಸ್ವಾಧೀನದಲ್ಲಿ ಇದ್ದು, ಅದನ್ನು ತೋರಿಸಿದಾಗ ಸಂಬಂಧಿತ ಅಧಿಕಾರಿಗಳು ಗಮನಹರಿಸದೆ ಇಲ್ಲಸಲ್ಲದ ನೆಪಹೇಳಿ ತಪ್ಪಿಸಿಕೊಳ್ಳುತ್ತಿದ್ದಾರೆ. ಅವರು ಆಯ್ಕೆ ಮಾಡಿರುವ ಜಾಗ ಊರ ಮಧ್ಯೆ ಇದೆ. ಇಲ್ಲಿ ಹಿಂದಿನಿಂದಲೂ ವಾಸವಾಗಿರುವ ಮೂರು ಕುಟುಂಬಗಳಿವೆ. ಈ ಎಲ್ಲಾ ಕಾರಣಗಳಿಂದ ಕೆ.ಇ.ಬಿ. ಸಬ್ ಸ್ಟೇಷನ್ ಆ ಸ್ಥಳಕ್ಕಿಂತ ಬೇರೆಡೆಯಲ್ಲಿ ಸ್ಥಾಪಿಸುವುದು ಉತ್ತಮ. ಆದರೆ ಸ್ಥಳ ನಿರ್ಧಾರದ ಬಗ್ಗೆ ಸ್ಥಳೀಯ ಅಧಿಕಾರಿಗಳು ಗಮನಹರಿಸದಿರುವ ಕಾರಣ ಬೆಂಗಳೂರಿನ ಕೇಂದ್ರ ಕಛೇರಿಯಿಂದ ಪರಿಣತ ಅಧಿಕಾರಿಗಳ ತಂಡವೊಂದನ್ನು ವಿಟ್ಲಕ್ಕೆ ಕಳುಹಿಸಿ, ಖಾಲಿ ಇರುವ ಇತರೆ ಸರ್ಕಾರಿ ಸ್ಥಳವನ್ನು ಪರಿಶೀಲಿಸಿ ಅದರ ಸೂಕ್ತತೆಯ ಬಗ್ಗೆ ಸಲಹೆ ನೀಡುವಂತೆ ವ್ಯವಸ್ಥೆ ಮಾಡಿ ವಿನಾಕಾರಣ ವಿಳಂಬವಾಗುತ್ತಿರುವ ವಿಟ್ಲದ ಕೆ.ಇ.ಬಿ. ಸಬ್ ಸ್ಟೇಷನ್ ಶೀಘ್ರದಲ್ಲಿ ಕಾರ್ಯರೂಪಕ್ಕೆ ಬರುವಂತೆ ಮಾಡಬೇಕಾಗಿ ಮಾನ್ಯ ವಿದ್ಯುತ್ ಸಚಿವರನ್ನು ಕಳಕಳಿಯಿಂದ ವಿನಂತಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ ವಿಟ್ಲದಲ್ಲಿ ಒಂದು ೩೩.೧೧ ಕೆ.ವಿ. ಜೆ ಎಂ.ವಿ.ಎ ಸಾಮರ್ಥ್ಯದ ಸಬ್ ಸ್ಟೇಷನ್ ಅನ್ನು ಹಾಕುವ ಯೋಜನೆಯಿದ್ದು ಇದನ್ನು ೧೯೮೮-೮೯ರಲ್ಲಿ ಕಾರ್ಯಗತ ಮಾಡಲು ಉದ್ದೇಶಿಸಿದೆ. ಈ ಸಬ್ ಸ್ಟೇಷನ್ ಅನ್ನು ಸ್ಥಾಪಿಸಲು ಎರಡು ಎಕರೆ ಜಮೀನನ್ನು ಆಯ್ಕೆ ಮಾಡಿದ್ದು ಮಂಗಳೂರು ವಲಯದ ಮುಖ್ಯ ಅಭಿಯಂತರರು ಸ್ಥಳ ಪರಿಶೀಲನೆ ಮಾಡಿ ಸ್ಥಳ ಸೂಕ್ತವೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಸದರಿ ಎರಡು ಎಕರೆ ಸ್ಥಳ ಸರ್ಕಾರದ ಜಮೀನು. ಇದನ್ನು ವಿದ್ಯುತ್ ಮಂಡಳಿಗೆ ವಹಿಸಿಕೊಡಲು ಜಿಲ್ಲಾ ಅಧಿಕಾರಿಗಳನ್ನು ಕೇಳಲಾಗಿದೆ.

ಈ ಜಮೀನಿನಲ್ಲಿ ಸಾರ್ವಜನಿಕರೊಬ್ಬರು ತೆಂಗಿನ ಸಸಿ ಹಾಕಿದ್ದು ತಕರಾರು ಹೂಡಿದ್ದರು. ಅಸಿಸ್ಟೆಂಟ್ ಕಮೀಷನರ್ ಅವರು ಜಿಲ್ಲಾಧಿಕಾರಿಗಳಿಗೆ ಸದರಿ ಜಮೀನನ್ನು ವಶಪಡಿಸಿಕೊಂಡಿರುವುದಾಗಿಯೂ ಅದನ್ನು ವಿದ್ಯುತ್ ಮಂಡಳಿಗೆ ವಹಿಸಿಕೊಡಬಹುದೆಂದೂ ತಿಳಿಸಿದ್ದಾರೆ ಜಿಲ್ಲಾಧಿಕಾರಿಗಳು ಈ ಸರ್ಕಾರಿ ಜಮೀನನ್ನು ಇನ್ನೂ ಮಂಡಳಿಗೆ ವಹಿಸಿಕೊಟ್ಟಿಲ್ಲ. ಇದರ ಬಗ್ಗೆ ಜಿಲ್ಲಾಧಿಕಾರಿಗಳನ್ನು ಒತ್ತಾಯ ಮಾಡಲಾಗುತ್ತಿದೆ ಈ ಜಮೀನನ್ನು ಸಾಧ್ಯವಾದಷ್ಟು ಬೇಗ ಜಿಲ್ಲಾಕಾರಿಗಳಿಂದ ಪಡೆದು ಅಲ್ಲಿ ಸಬ್ ಸ್ಟೇಷನ್ ಕೆಲಸ ಪ್ರಾರಂಭ ಮಾಡಲಾಗುವುದು.

(೧೮) ತಿಪಟೂರು ಗ್ರಾಮಾಂತರ ಪೋಲೀಸ್ ಇನ್ಸ್‌ಪೆಕ್ಟರ್ ರಂಗನಾಥ್‌ರವರಂ ಅಧಿಕಾರ ದುರುಪಯೋಗದ ಬಗ್ಗೆ ಕ್ರಮ ತೆಗೆದುಕೊಳ್ಳಲಂ ಮನವಿ

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೫ನೇ ಇಸವಿಯಲ್ಲಿ ಅಂದರೆ ೧-೫-೧೯೮೫ರಲ್ಲಿ ತಿಪಟೂರು ಗ್ರಾಮಾಂತರ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಂಗನಾಥ್‌ರವರು, ತಿಪಟೂರು ತಾಲ್ಲೂಕ್ ಕಿಬ್ಬನಹಳ್ಳಿ ಹೋಬಳಿಯ ಮಲ್ಲೇನಹಳ್ಳಿ ಗ್ರಾಮದ ಜಮೀನುದಾರ ಪೂಜಾರಿ ಮೂಡಲಗಿರಿಯಪ್ಪನವರನ್ನು ವಿನಾಕಾರಣ ಪೋಲೀಸ್ ಠಾಣೆಗೆ ಕರೆಸಿ, ಹೆದರಿಸಿ ತಾ: ೨-೫-೮೫ರಲ್ಲಿ ೪೦,೦೦೦-೦೦ ರೂ. ಹಣವನ್ನು ಕಿತ್ತುಕೊಂಡಿದ್ದ ಬಗ್ಗೆ ಈ ಸದನದಲ್ಲಿ ಪ್ರಸ್ತಾಪವಾಗಿದ್ದಿತು. ಈಗ ಪೋಲೀಸ್ ವಿಚಾರಣೆ ನಡೆದು ರಿಪೋರ್ಟ್ ಡಿ.ಐ ಜಿ., ಬೆಂಗಳೂರು ವಿಭಾಗಕ್ಕೆ ಬಂದಿರುತ್ತದೆ. ಸದರಿ ವರದಿಯನ್ನಾಧರಿಸಿ ಸರ್ಕಾರಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಪಿ. ಎಸ್. ಐ. ರಂಗನಾಥ್‌ರವರು ತಿಪಟೂರು ಗ್ರಾಮಾಂತರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದಾಗ (ಮಾರ್ಚ್ ೧೯೮೫) ಅಧಿಕಾರ ದುರುಪಯೋಗಪಡಿಸಿ